ದಿನಾಂಕಃ 20.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ನೇ ಪ್ರತಿವಾದಿ ಪರ ಶ್ರೀ ಎಂ.ಎಸ್.ಆರ್. ವಕೀಲರಿಂದ:**

ನಾನು ಪ್ರಸ್ತುತ ದಾವೆಯನ್ನು 2022 ನೇ ಸಾಲಿನಲ್ಲಿ ದಾಖಲಿಸಿರುತ್ತೇನೆ ಆದರೆ ದಿನಾಂಕ ನೆನಪಿರುವುದಿಲ್ಲ. ಪ್ರತಿವಾದಿಯವರು ರಾಜಕೀಯ ಒತ್ತಡದಿಂದ ನನ್ನ ಸ್ವತ್ತಿಗೆ ತೊಂದರೆ ಮಾಡುತ್ತಿದ ಕಾರಣ ಈ ದಾವೆಯನ್ನು ದಾಖಲಿಸಿರುತ್ತೇನೆ. ನಾನು ಸ.ನಂ.166 ರ ಜಮೀನಿಗೆ ದಾವೆಯನ್ನು ಹೂಡಿರುತ್ತೇನೆ. ದಾವಾ ಸ್ವತ್ತು 3 ಎಕರೆ 30 ಗುಂಟೆ ವಿಸ್ತೀರ್ಣ ಹೊಂದಿರುತ್ತದೆ. ದಾವಾ ಸ್ವತ್ತಿನ ಚೆಕ್ಕುಬಂದಿಯು ಉತ್ತರಕ್ಕೆ, ದಕ್ಷಿಣ ಮತ್ತು ಪೂರ್ವಕ್ಕೆ ಸ.ನಂ.166 ರ ಸರ್ಕಾರಿ ಜಮೀನು ಮತ್ತು ಪಶ್ಚಿಮಕ್ಕೆ ಸ.ನಂ.168 ರ ಜಮೀನು ಬರುತ್ತದೆ. ದಾವಾ ಸ್ವತ್ತು ಸರ್ಕಾರಿ ಜಮೀನು ಎಂದರೆ ಸರಿ. ಇಂದಿಗೂ ದಾವಾ ಸ್ವತ್ತು ನನ್ನ ಹೆಸರಿಗೆ ಮಂಜೂರು ಆಗಿರುವುದಿಲ್ಲ ಎಂದರೆ ಸರಿ ಆದರೆ ಅನುಭವದಲ್ಲಿ ಇರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರು 2022 ನೇ ಸಾಲಿನಲ್ಲಿ ನನಗೆ ತೊಂದರೆಯನ್ನು ನೀಡಿರುತ್ತಾರೆ. ಪ್ರತಿವಾದಿಯವರು ತೊಂದರೆ ನೀಡುತ್ತಿರುತ್ತಾರೆ ಎಂದು ನಾನು ಪೋಲಿಸ್ ಠಾಣೆಗೆ ದೂರನ್ನು ನೀಡಿರುವುದಿಲ್ಲ. ನಿಪಿ-5 ರಂತೆ 1 ನೇ ಪ್ರತಿವಾದಿಯವರು ನನ್ನ ಮತ್ತು ವಿಜಯ್ ಕುಮಾರ್ ಎಂಬುವವರ ವಿರುದ್ಧ ಅಸಲು ದಾವಾ 102/2014 ರಲ್ಲಿ ದಾವೆಯನ್ನು ದಾಖಲಿಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾವೆಯು ವಜಾಗೊಂಡಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಾನು 1 ನೇ ಪ್ರತಿವಾದಿಯವರಿಗೆ ರಸ್ತೆಗೆ ತಡೆ ಮಾಡುತ್ತೇನೆ ಎಂದು ದಾಖಲು ಮಾಡಿದ್ದರು ಎಂದರೆ ಸರಿ.

ಸ.ನಂ.221/4 ಹೊರನಾಡು ಜಮೀನು ಅಸಲು ದಾವೆ 102/2014 ರ 2 ನೇ ಪ್ರತಿವಾದಿಯವರಿಗೆ ಸೇರಿರುತ್ತದೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಅದೇ ರೀತಿ ಸ.ನಂ.221/6 1 ನೇ ಪ್ರತಿವಾದಿಯವರು ಜಮೀನು ನನಗೆ ಮಾಹಿತಿ ಇರುವುದಿಲ್ಲ. ಅಸಲು ದಾವೆ 102/2014 ನ್ನು ದಾಖಲಿಸಿದ ಸಮಯದಲ್ಲಿ ನನ್ನ ಮತ್ತು ಸದರಿ ದಾವೆಯ 2 ನೇ ಪ್ರತಿವಾದಿಯವರ ಜಮೀನಿಗೆ ಹೋಗಲು ರಸ್ತೆ ಎಂದರೆ ಸರಿಯಲ್ಲ. ಸ.ನಂ.221/4 ರ ಜಮೀನಿಗೆ ಸ.ನಂ.166/4 ರ ಸರ್ಕಾರಿ ಜಮೀನಿನ ಮೂಲಕ ಹಾದುಹೋಗಬೇಕು ಎಂದರೆ ಸರಿಯಲ್ಲ. ಸ.ನಂ.221/4 ಮತ್ತು ಸ.ನಂ.221/6 ರ ಜಮೀನಿಗೆ ಅದಲು ಬದಲು ಪತ್ರ ಮಾಡಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1 ನೇ ಪ್ರತಿವಾದಿಯವರು ಮತ್ತು ವಿಜಯ್ ಕುಮಾರ್ ಎಂಬುವವರು ಒಂದೇ ಕುಟುಂಬದವರು ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾವೆಲ್ಲರೂ ಒಂದೇ ಧರ್ಮಕ್ಕೆ ಸೇರಿರುತ್ತೇವೆ ಎಂದರೆ ಸರಿ. 1 ನೇ ಪ್ರತಿವಾದಿಯವರು ಮತ್ತು ವಿಜಯ್ ಕುಮಾರ್ ಎಂಬುವವರು ಒಂದೇ ಕುಟುಂಬಕ್ಕೆ ಸೇರಿದವರು ಎಂದು ಹೇಳಿದ್ದಲ್ಲಿ ನನಗೆ ತೊಂದರೆ ಉಂಟಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.221/4 ಪ್ರಸ್ತುತವಾಗಿ 1 ನೇ ಪ್ರತಿವಾದಿಯವರ ಹೆಸರಿನಲ್ಲಿ ಇರುಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

**ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.